ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/12/2019

ಹಿತರಕ್ಷಣೆ ತಿದ್ದುಪಡಿ ಬಿಲ್ ಮಂಡನೆ | ಅಳಿಯ, ಸೊಸೆಗೂ ಹಿರಿಯರ ಹೊಣೆ

# ಹಿರಿಯರ ಕಡೆಗಣಿಸಿದರೆ 6 ತಿಂಗಳು ಜೈಲು

**ಹೊಸದಿಲ್ಲಿ:** ಹಿರಿಯ ಜೀವಗಳ ಗೌರವದ ಬದುಕಿಗೆ ನೆರವಾಗುವ ಆಶಯದೊಂದಿಗೆ ಕೇಂದ್ರ ಸರಕಾರ 'ಪೋಷಕರು ಮತ್ತು ಹಿರಿಯ ನಾಗರಿಕರ ಹಿತರಕ್ಷಣಾ ತಿದ್ದುಪಡಿ ವಿಧೇಯಕ-2019'ವನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಿದೆ.



ಹಿರಿಯರ ಆರೈಕೆಗೆ ಉದಾಸೀನ ತೋರುವ, ಕಾನೂನು ಮೀರಿ ಹೆತ್ತವರನ್ನು ದೂರ ತಳ್ಳುವ ಮಕ್ಕಳಿಗೆ ಆರು ತಿಂಗಳು ಜೈಲು ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ಇಲ್ಲವೇ ಎರಡನ್ನೂ ವಿಧಿಸುವ ಕಠಿಣ ನಿಯಮ ವಿಧೇಯಕದಲ್ಲಿದೆ.

ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ಸಚಿವ ತಾವರ್‌ಚಂದ್ ಗೆಹ್ಲೋಟ್ ಅವರು ವಿಧೇಯಕ ಮಂಡಿಸಿ, ''ಪೋಷಕರು ಮತ್ತು ಹಿರಿಯ ನಾಗರಿಕರ ಮೂಲಭೂತ ಅಗತ್ಯತೆಗಳು, ಸುರಕ್ಷತೆ, ಭದ್ರತೆ, ಆಶ್ರಯ ಹಾಗೂ ಸಂಸ್ಥೆಗಳ ನಿರ್ವಹಣೆ ಮತ್ತು ನಿಯಂತ್ರಣ ಕುರಿತು ಸಂವಿಧಾನದಡಿ ಖಾತರಿಪಡಿಸಿದ ಹಕ್ಕುಗಳನ್ನು ಇದು ಒದಗಿಸುತ್ತದೆ,'' ಎಂದು ಹೇಳಿದರು.

ತಿದ್ದುಪಡಿ ವಿಧೇಯಕದಲ್ಲಿ ಹಿರಿಯರ ಆರೈಕೆ ಕೇಂದ್ರಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆ. ಯಲ್ಲದೇ ಸ್ಥಾಪನೆಗೆ ನಿರ್ದಿಷ್ಟ ಮಾನದಂಡಗಳನ್ನು ವಿಧಿಸಲಾಗಿದೆ. 'ದುರ್ವರ್ತನೆ' ಎಂಬ ಪದದ ವ್ಯಾಖ್ಯಾನವನ್ನು ದೈಹಿಕ ಹಲ್ಲೆ, ದೈಹಿಕ ಮತ್ತು ಮಾನಸಿಕ ಶೋಷಣೆ, ಬೈಗುಳದ ನಿಂದನೆ, ನಿರ್ಲಕ್ಷ್ಯ, ಆರ್ಥಿಕ ಶೋಷಣೆ ಎಂಬರ್ಥದಲ್ಲಿ ವಿಸ್ತರಿಸಲಾಗಿದೆ. ಇನ್ನು 'ಮಕ್ಕಳು' ಎಂಬ ಪದವನ್ನು ತಂದೆ-ತಾಯಿಗೆ ಜೈವಿಕವಾಗಿ ಜನಿಸಿದವರಷ್ಟೆ ಅಲ್ಲದೇ ದತ್ತು ತೆಗೆದುಕೊಂಡವರನ್ನೂ ಒಳಗೊಂಡಂತೆ ವ್ಯಾಖ್ಯಾನಿಸಲಾಗಿದೆ. ಅಳಿಯ, ಸೊಸೆ, ಮೊಮ್ಮಗ, ಮೊಮ್ಮಗಳು ಸಹ ಕಾನೂನಾತ್ಮಕವಾಗಿ ಹಿರಿಯರ ಪೋಷಣೆಯ ಜವಾಬ್ದಾರರಾಗಿರುತ್ತಾರೆ ಎಂದು ತಿಳಿಸಲಾಗಿದೆ.

**ಸಂಸತ್ತಿನ ಸ್ಥಾಯಿ ಸಮಿತಿಗೆ:** ವೈಯಕ್ತಿಕ ಮಾಹಿತಿ ರಕ್ಷಣಾ ವಿಧೇಯಕವನ್ನು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಬುಧವಾರ ಸಂಸತ್ತಿನ ಜಂಟಿ ಸ್ಥಾಯಿ ಸಮಿತಿಗೆ ಒಪ್ಪಿಸಿದ್ದು, ಸಮಿತಿಯು ಒಂದಷ್ಟು ತಿದ್ದುಪಡಿಗಳ ಶಿಫಾರಸಿನೊಂದಿಗೆ ಬಜೆಟ್ ಅಧಿವೇಶನದ ಅಂತ್ಯದೊಳಗೆ ವರದಿ ಸಲ್ಲಿಸಲಿದೆ.

**ಮಂಡನೆ:** ಉದ್ಯೋಗಿಗಳ ಸಾಮಾಜಿಕ ಭದ್ರತೆಗೆ ಸಂಬಂಧಿಸಿದ 9 ಕಾನೂನುಗಳನ್ನು ವಿಲೀನಗೊಳಿಸಿ ಕಾರ್ಮಿಕ ಸಂಹಿತೆ ವಿಧೇಯಕವನ್ನು ಕಾರ್ಮಿಕ ಸಚಿವ ಸಂತೋಷ್ ಗಂಗ್ವಾರ್ ಲೋಕಸಭೆಯಲ್ಲಿ ಇದೇ ವೇಳೆ ಮಂಡಿಸಿದರು.

**ತಿದ್ದುಪಡಿಯ ತಿರುಳು**

- ವೃದ್ಧರು ತಮ್ಮ ಬಗ್ಗೆ ನಿರ್ಲಕ್ಷ್ಯ ತೋರುವ ಮಗ, ಮಗಳು, ಸೊಸೆ ಹಾಗೂ ಅಳಿಯಂದಿರ ವಿರುದ್ಧ ದೂರು ಕೊಡಬಹುದು.
- ಹಿರಿಯ ನಾಗರಿಕರ ನಿರ್ವಹಣೆ ಮತ್ತು ನೆರವಿಗೆ ಪ್ರಾಧಿಕಾರ ರಚಿಸಲು ಅವಕಾಶ.
- 80 ವರ್ಷಕ್ಕಿಂತ ಮೇಲ್ಪಟ್ಟವರ ದೂರುಗಳನ್ನು ಪ್ರಾಧಿಕಾರ 60 ದಿನದಲ್ಲಿ ಇತ್ಯರ್ಥಪಡಿಸಬೇಕು. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಹೆಚ್ಚುವರಿ 30 ದಿನ ಕಾಲಾವಕಾಶಕ್ಕೆ ಅವಕಾಶ.
- ಮಾಸಿಕ ಗರಿಷ್ಠ 10,000 ರೂ. ನಿರ್ವಹಣಾ ವೆಚ್ಚ ಮಿತಿ ತೆರವುಗೊಳಿಸಿ ದುಡಿಮೆ ಆಧರಿಸಿ ನಿಗದಿಪಡಿಸಲು ಅವಕಾಶ.
- ಹಿರಿಯ ನಾಗರಿಕರ ಪ್ರಕರಣಗಳಿಗೆ ಪ್ರತಿ ಪೊಲೀಸ್ ಠಾಣೆಯಲ್ಲಿ ನೋಡಲ್ ಅಧಿಕಾರಿಯ ನೇಮಕ, ಜಿಲ್ಲಾ ಮಟ್ಟದಲ್ಲಿ ವಿಶೇಷ ಪೊಲೀಸ್ ಘಟಕ.
- ಗರಿಷ್ಠ 10 ಸಾವಿರ ರೂ. ದಂಡ, 6 ತಿಂಗಳ ಜೈಲು ಇಲ್ಲವೇ ಎರಡನ್ನೂ ವಿಧಿಸಲು ಅವಕಾಶ.